ದಿನಾಂಕಃ 22.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು 3 ನೇ ಎದುರುದಾರರ ಪರ ಶ್ರೀ ಜಿ.ಎಸ್ ಸಿ ವಕೀಲರಿಂದಃ-

ಘಟನಾ ಸ್ಥಳ ಭಟ್ಕಳದಿಂದ ಸಾಗರಕ್ಕೆ ಬರುತ್ತಿದ್ದ ಮುಖ್ಯರಸ್ತೆ ಎಂದರೆ ಸರಿ. ಅಲ್ಲಿ ರಸ್ತೆ ಅಗಲ ಇದೆ ಎಂದರೆ ಸರಿಯಲ್ಲ. ಅದು ರಾಜ್ಯ ಹೆದ್ದಾರಿ ಎಂದರೆ ಸರಿಯಲ್ಲ. ಎದುರುಗಡೆ ವಾಹನವನ್ನು ನಾನು 300 ಅಡಿಯಿಂದ ನೋಡಿರುತ್ತೇನೆ. ಎದುರಗಡೆಯಿಂದ ಬರುತ್ತಿದ್ದ ವಾಹನದ ವೇಗವನ್ನು ನಿಖರವಾಗಿ ಹೇಳಲು ಆಗುವುದಿಲ್ಲ. ಎದುರಗಡೆಯಿಂದ ಬರುತ್ತಿದ್ದ ವಾಹನವನ್ನು ನೋಡಿ ನಾನೇ ಸಡನ್ ಆಗಿ ಬ್ರೇಕ್ ಹಾಕಿದ್ದರಿಂದ ನನ್ನ ತಪ್ಪಿನೀಂದಲೇ ಅಪಘಾತ ಆಗಿರುತ್ತದೆ ಎಂದರ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಎದುರುದಾರರ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ಪೊಲೀಸರು ಸ್ಥಳ ಮಹಜರ್ ಮತ್ತು ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿ. ಅವುಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸ್ಥಳ ಮಹಜರ್ ಮತ್ತು ಕಚ್ಚಾ ನಕಾಶೆಯಲ್ಲಿ ನನ್ನದೇ ತಪ್ಪು ಎಂದು ನಮೂದಾಗಿರುವುದರಿಂದ ನಾನು ಅವುಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೆ 1 ನೇ ಎದುರುದಾರರ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತ ಆದ ತಕ್ಷಣ ಭಟ್ಕಳ ಆಸ್ಪತ್ರೆಗೆ ತೋರಿಸಿರುತ್ತೇನೆ ಹಾಗೂ ಹೆಚ್ಚಿನ ಚಿಕಿತ್ಸೆಗೆ ಕುಂದಾಪುರ ವಿವೇಕ ಆಸ್ಪತ್ರೆಗೆ ತೋರಿಸಿರುತ್ತೇನೆ. ಅಲ್ಲಿ ವೈದ್ಯರು ನೀಡಿದಂತಹ ಗಾಯದ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತೇನೆ. ನನಗೆ ಪರಿಹಾರ ಪಡೆಯುವಂತಹ ಗುರುತರ ಗಾಯಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ಒಳರೋಗಿ ಆಗಿ 7 ದಿನ ಆಸ್ಪತ್ರೆಯಲ್ಲಿ ದಾಖಲಾಗಿದ್ದೆವು. ಈ ಬಗ್ಗೆ ದಾಖಲಾತಿ ಇದೆ. ಅದನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ತಾಯಿ ಲಕ್ಷ್ಮಮ್ಮ ರವರ ಭುಜ ಕಟ್ ಆಗಿತ್ತು. ನಾನು ದಾಖಲುಪಡಿಸಿದ ದಾಖಲಾತಿಗಳು ನನ್ನ ತಾಯಿಗೆ ಸಂಬಂದಪಟ್ಟವು ಎಂದರೆ ಸಾಕ್ಷಿ ನಮ್ಮಿಬ್ಬರ ಬಿಲ್ಲುಗಳು ಎಂದು ಉತ್ತರಿಸುತ್ತಾರೆ. ಸದರಿ ಬಿಲ್ಲುಗಳಲ್ಲಿ ಹೆಸರು ನನ್ನ ತಾಯಿಯದ್ದೇ ಇದೆ ಎಂದರೆ ಸರಿ. ನಿಪಿ-8 ರಿಂದ ನಿಪಿ-10 ಗಳು ನನಗೆ ಸಂಬಂದಪಟ್ಟವುಗಳು ಅಲ್ಲ ಎಂದರೆ ಸರಿಯಲ್ಲ. ನಿಪಿ-7 ದಿಃ 04.04.2017 ಕ್ಕೆ ಸಂಬಂದಪಟ್ಟ ದಾಖಲಾತಿ ಎಂದರೆ ಸರಿ. ನಿಪಿ-7 ಕ್ಕೂ ಹಾಗೂ ಅಪಘಾತಕ್ಕೂ ಸಂಬಂದ ಇಲ್ಲ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ.

ಅಪಘಾತಕ್ಕೂ ಮೊದಲು ಡಾ.ರಘುನಾತ್ ಬಳಿ ತೋರಿಸಿರುತ್ತೇವೆ. ಸಾಕ್ಷಿ ಮುಂದುವರೆದು ಅವರು ನಮ್ಮ ಕುಟುಂಬದ ವೈದ್ಯರು ಎಂದು ನುಡಿಯುತ್ತಾರೆ. ಚಿಕಿತ್ಸೆ ಪಡೆದ ನಂತರ ನಾನು ಗುಣಮುಖನಾಗಿರುತ್ತೇನೆ ಎಂದರೆಸ ರಿಯಲ್ಲ. ಸಾಕ್ಷಿ ಮುಂದುವರೆದು ಇಂದಿಗೂ ನನಗೆ ಡಿಸ್ಕ್ ನೋವು ಬರುತ್ತದೆ ಹಾಗೂ ದೊಡ್ಡ ಕೆಲಸ ಮಾಡಲು ಬರುವುದಿಲ್ಲ ಎಂದು ಉತ್ತರಿಸುತ್ತಾರೆ. ಮೂಳೆ ಮುರಿದಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಡಿಸ್ಕ್ ಜಾಯಿಂಟ್ ಕ್ರ್ಯಾಕ್ ಆಗಿರುತ್ತದೆ ಅದನ್ನು ಶಸ್ತ್ರ ಚಿಕಿತ್ಸೆಯಿಂದ ಗುಣಪಡಿಸಲು ಆಗುವುದಿಲ್ಲ ವಿಶ್ರಾಂತಿ ಅಗತ್ಯ ಇದೆ ಎಂದು ವೈದ್ಯರು ಹೇಳಿರುತ್ತಾರೆ. ಇದನ್ನು ತೋರಿಸಲು ನನ್ನ ಬಳಿ ದಾಖಲಾತಿ ಇರುವುದಿಲ್ಲ.

ನಾನು ಕೃಷಿ ಕೆಲಸ ಮಾಡುತ್ತೇನೆ. ನನಗೆ 5-6 ಎಕರೆ ಜಮೀನು ಇದೆ. ಭತ್ತ ಮತ್ತು ಅಡಿಕೆ ಇದೆ. ಟ್ರ್ಯಾಕ್ಟರ್ ಇದ್ದು ಅದರ ಚಾಲಕನಾಗಿಯೂ ಕೆಲಸ ಮಾಡುತ್ತಿದ್ದೆ. ತಿಂಗಳು 30 ಸಾವಿರ ದುಡಿಯುತ್ತಿದ್ದ ಬಗ್ಗೆ ದಾಖಲಾತಿ ಇರುವುದಿಲ್ಲ. ಜಮೀನಿನ ಉತ್ಪತ್ತಿಯಲ್ಲೆ ಈಗಲೂ ಜೀವನ ಮಾಡುತ್ತಿದ್ದೇನೆ ಎಂದರೆ ಸರಿ. ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವಂತ ಖರ್ಚು ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಲಾಯಿಸುತ್ತಿದ್ದ ವಾಹನ ನನ್ನದೇ ಎಂದು ತೋರಿಸಲು ನನ್ನ ಬಳಿ ದಾಖಲಾತಿ ಇದೆ ಅದನ್ನು ನಾನು ನೀಡಿರುತ್ತೇನೆ. ನನಗೆ ಚಾಲನಾ ಪರವಾನಿಗೆ ಇದೆ ಅದನ್ನು ನಾನು ಹಾಜರುಪಡಿಸಿದ್ದೇನೆ. ಅದರ ಅವದಿ ಮತ್ತು ನಂಬರ್ ಈಗ ನನಗೆ ನೆನಪಿರುವುದಿಲ್ಲ. ನನ್ನ ವಾಹನಕ್ಕೆ ಯುನೈಟೆಡ್ ಕಂಪೆನಿಯ ವಿಮೆ ಇತ್ತು. ನನ್ನ ವಾಹನಕ್ಕೆ ಸುಮಾರು 1 ಲಕ್ಷಕ್ಕೂ ಹೆಚ್ಚು ಹಾನಿಯಾಗಿರುತ್ತದೆ. ಈ ಬಗ್ಗೆ ನಾನು ಎಸ್ಟಿಮೇಟ್ ಅನ್ನು ಹಾಜರುಪಡಿಸಿರುವುದಿಲ್ಲ. ಯುನೈಟೆಡ್ ಕಂಪೆನಿಯವರು ವಾಹನ ಸಂಪೂರ್ಣ ನಷ್ಟ ಆಗಿದೆ ಎಂದು ಹೇಳಿ ನನಗೆ ಪರಿಹಾರವನ್ನು ನೀಡಿರುತ್ತಾರೆ. ನಾನು ಪರಿಹಾರ ಕೊಡಲಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಸ್ಸಿನ ದಾಖಲಾತಿಗಳನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ ಪೊಲೀಸರು ಮಾಡಿರುತ್ತಾರೆ. ಬಸ್ಸಿನ ಚಾಲಕನಿಗೆ ಚಾಲನ ಪರವಾನಿಗೆ ಇತ್ತು. ಪೊಲೀಸರ ಮಾಹಿತಿ ಮೇರೆಗೆ ನಾನು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಹೇಳಿರುವುದು ಪೊಲೀಸರ ಮಾಹಿತಿ ಮೇರೆಗೆ. ನಾನು ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
Addl. MACT-10 ಸಾಗರ.